ಓ:ಎಸ್:ನಂ.*48/2015*

ಪಿ.ಡಬ್ಲ್ಯೂ- *1*

**ದಿಃ *07-07-2022* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಆರ್ ಕೆ ವಕೀಲರಿಂದ**

ವಾದಿಯು ದಾವ ಆಸ್ತಿಯಲ್ಲಿ ಮನೆ ಕಟ್ಟಲು ಹೋದಾಗ ವಾದಿಗೆ ಅಡ್ಡಿಪಸಿಡಿದ ಪರಿಣಾಮ ಪ್ರತಿವಾದಿಯ ವಿರುದ್ದ ಈ ದಾವೆಯನ್ನು ಹೂಡಿರುತ್ತಾರೆ. ಈ ದಾವೆಯನ್ನು ಹೂಡಲು ಎಲ್ಲಾ ಮಾಹಿತಿಗಳನ್ನು ನಾನು ಮತ್ತು ನನ್ನ ಗಂಡ ವಕೀಲರಿಗೆ ನೀಡಿರುತ್ತೇವೆ. ದಾವ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತು, ಪೂರ್ವಕ್ಕೆಃ ಮಲ್ಲಾರಾಧ್ಯರವರ ಮನೆ, ಪಶ್ಚಿಮಕ್ಕೆಃ ದಾರಿ ಮತ್ತು ಕೃಷ್ಣಪ್ಪನ ಮನೆ, ಉತ್ತರಕ್ಕೆಃ ಸರ್ವೆ ನಂ.*167*ರ ಜಮೀನು, ದಕ್ಷಿಣಕ್ಕೆಃ ಗೋಪಾಲ ಕಾಲೋನಿ ರಸ್ತೆ ಇದೆ. ದಾವ ಆಸ್ತಿಯ ವಿಸ್ತೀರ್ಣ *40* ಇಂಟು *30* ಅಡಿಗಳು. ದಾವ ಸ್ವತ್ತಿನಲ್ಲಿ ವಾದಿಯು ಎಂದಿಗೂ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಮನೆ ಕಟ್ಟಿಸಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಗಳನ್ನು ನಾನು ನೋಡಿದ್ದೇನೆ. ನಾನು ದಾವ ಆಸ್ತಿಯಲ್ಲಿ ಮನೆ ಕಟ್ಟಿಸಿದ ಬಗ್ಗೆ ತೋರಿಸಲು ಯಾವುದೇ ಪೋಟೋ ಮತ್ತು ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಕಟ್ಟಿಸಿರುವ ಮನೆಗೆ ವಿದ್ಯುತ್‌ಚ್ಛಕ್ತಿ ಸಂಪರ್ಕವನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಾವು ಹುಲ್ಲಿನ ಮನೆಯನ್ನು ಕಟ್ಟಿಸಿರುತ್ತೇವೆ, ಆದ್ದರಿಂದ ವಿದ್ಯುತ್‌ಚ್ಛಕ್ತಿ ಸಂಪರ್ಕವನ್ನು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ನಾನು ಭದ್ರಾವತಿಯಲ್ಲಿ ವಾಸವಾಗಿರುವ ಕಾರಣ ನಾವು ದಾವ ಆಸ್ತಿಯಲ್ಲಿ ಯಾವುದೇ ಮನೆಯನ್ನು ಕಟ್ಟಿಸಿಲ್ಲ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ಗೋಪಾಲ ಕಾಲೋನಿಯ ಸರ್ವೆ ನಂ.*52,* ವಿಸ್ತೀರ್ಣ *1* ಎಕರೆ *20* ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ವಾದಿಯ ತಮ್ಮನಾದ ಕೃಷ್ಣಪ್ಪನವರು ವಾದಿಯ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿ ಇದೆ ನ್ಯಾಯಾಲಯದಲ್ಲಿ ಅಸಲು ದಾವ ಸಂಖ್ಯೆ *394/2014* ರಂತೆ ದಾವೆಯನ್ನು ಸಲ್ಲಿಸಿದ್ದಾರೆಂದರೆ, ಸಾಕ್ಷಿಯು ದಾವೆ ಸಲ್ಲಿಸಿದ್ದಾರೆ ಆದರೆ *1* ಎಕರೆ *20* ಗುಂಟೆಗೆ ಅಲ್ಲ, *1* ಎಕರೆಗೆ ಮಾತ್ರ ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ದಾವ ಆಸ್ತಿಗೆ ಒಳಗೊಂಡಂತೆ ಸರ್ವೆ ನಂ.*52* ರಲ್ಲಿ *1* ಎಕರೆ *20* ಗುಂಟೆ ಜಮೀನಿನಲ್ಲಿ ಪ್ರತಿವಾದಿಯ ತಂದೆ *40* ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಸ್ವಾಧೀನಾನುಭವದಲ್ಲಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಸದರಿ ಜಮೀನಿನಲ್ಲಿ ವಾಸ ಮಾಡಿಕೊಂಡು

ತಮ್ಮ ಮಕ್ಕಳ ಮದುವೆಯನ್ನು ಸಹ ಅಲ್ಲೇ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ಗಂಡ ವಿ ಐ ಎಸ್ ಎಲ್ ಕಂಪನಿ ಲಿಮಿಟೆಡ್‌ನಲ್ಲಿ ನೌಕರರಾಗಿದ್ದಾರು ಎಂದರೆ ಸರಿ. ನಾನು ಮತ್ತು ನನ್ನ ಗಂಡ ಭದ್ರಾವತಿಯ ವಿ ಐ ಎಸ್ ಎಲ್ ನ ಕ್ವಾಟ್ರಸ್ ನಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನಮ್ಮ ಮಕ್ಕಳ ವಿದ್ಯಾಭ್ಯಾಸ ಭದ್ರಾವತಿಯಲ್ಲಿ ಮಾಡಿರುತ್ತಾರೆಂದರೆ ಸರಿ.

ನಾನು ಮತ್ತು ನನ್ನ ಗಂಡ ಪ್ರತಿವಾದಿಯ ತಂದೆಗೆ ಸೇರಿದ ಆಸ್ತಿಯಲ್ಲಿ ವಿನಾಕಾರಣ ಹಸ್ತಕ್ಷೇಪ ಉಂಟು ಮಾಡಿರುವ ಕಾರಣ ಪ್ರತಿವಾದಿಯ ತಂದೆ ನಮ್ಮ ವಿರುದ್ದ ಅನೇಕ ಕ್ರಿಮಿನಲ್ ದೂರುಗಳನ್ನು ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿದ್ದಾರೆಂದರೆ ಸರಿಯಲ್ಲ. ದಾವ ಆಸ್ತಿಗೆ ಒಳಗೊಂಡಂತೆ *1* ಎಕರೆ *20* ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಗೋಪಾಲ ಗ್ರಾಮದ ವಾಸಿಯಾದ ಕದರಪ್ಪ ಎನ್ನುವವರು ಒಂದು ದಾವೆಯನ್ನು ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ತೀರ್ಪಿನಲ್ಲಿ ಪ್ರತಿವಾದಿಯ ತಂದೆ ದಾವ ಆಸ್ತಿಗೆ ಒಳಗೊಂಡಂತೆ ಗೋಪಾಲ ಕಾಲೋನಿಯ ಸರ್ವೆ ನಂ.*52* ರಲ್ಲಿ *1* ಎಕರೆ *20* ಗುಂಟೆ ಜಮೀನಿನಲ್ಲಿ ಪ್ರತಿವಾದಿಯ ತಂದೆ ಕೃಷ್ಣಪ್ಪನವರು ಸ್ವಾಧೀನಾನುಭದಲ್ಲಿದ್ದಾರೆಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಗೋಪಾಲ ಕಾಲೋನಿ ಗ್ರಾಮದ ಓಬಳಪ್ಪ ಎನ್ನುವವರು ನಮ್ಮ ಚಿತಾವಣೆ ಮೇರೆಗೆ ಪ್ರತಿವಾದಿಯ ತಂದೆಯ ವಿರುದ್ದ ಅಸಲು ದಾವ ಸಂಖ್ಯೆ *119/1987* ರಂತೆ ದಾವೆಯನ್ನು ದಾಖಲು ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ತೀರ್ಪು ಮತ್ತು ಡಿಕ್ರಿಯ ವಿರುದ್ದ ಪ್ರತಿವಾದಿಯ ತಂದೆ ಕೃಷ್ಣಪ್ಪನವರು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ, ತರೀಕೆರೆಯಲ್ಲಿ ಆರ್ ಎ. ನಂ. *68/89* ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯು ಕೃಷ್ಣಪ್ಪನ ಪರ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪು ಮತ್ತು ಡಿಕ್ರಿಯ ಪ್ರಕಾರ ಪ್ರತಿವಾದಿಯ ತಂದೆ ಕೃಷ್ಣಪ್ಪನವರು ಸರ್ವೆ ನಂ*52* ರಲ್ಲಿ *1* ಎಕರೆ *20* ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ.

*1991-92* ನೇ ಸಾಲಿನಲ್ಲಿ ಪ್ರತಿವಾದಿಯ ತಂದೆ ಕೃಷ್ಣಪ್ಪನವರು ಗೋಪಾಲ ಕಾಲೋನಿಯ ಸರ್ವೆ ನಂ.*52* ರಲ್ಲಿ *1* ಎಕರೆ *20* ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದೇನೆ ಎಂದು ಬಗರ್ ಹುಕುಂ ಕಮಿಟಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆಂದರೆ ಸಾಕ್ಷಿಯು ನಾವು ಕೂಡ ಸಲ್ಲಿಸಿದ್ದೇವೆಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆ ಬಗರ್ ಹುಕುಂ ಕಮಿಟಿಯ ಮುಂದೆ ಸಲ್ಲಿಸಿರುವ ಅರ್ಜಿಯು ಸಕಾಲಕ್ಕೆ ಇತ್ಯರ್ಥವಾಗದ ಕಾರಣ, ಪ್ರತಿವಾದಿಯ

ತಂದೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ಗೋಪಾಲ ಕಾಲೋನಿಯ ಸರ್ವೆ ನಂ.52 ರಲ್ಲಿ 1 ಎಕರೆ 20 ಗುಂಟೆಗೆ ಸಂಬಂಧಪಟ್ಟಂತೆ 1996 ರಲ್ಲಿ ತಾಲ್ಲೂಕು ಸರ್ವೆಯರ್ ರವರು ಒಂದು ಸರ್ವೆ ನಕ್ಷೆಯನ್ನು ತಯಾರು ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ಸರ್ವೆ ನಕ್ಷೆಯಲ್ಲಿ ಸರ್ವೆ ನಂ.52 ರ 1 ಎಕರೆ 20 ಗುಂಟೆ ಜಮೀನಿನಲ್ಲಿ ಕೃಷ್ಣಪ್ಪನವರು ಸ್ವಾಧೀನಾನುಭವದಲ್ಲಿದ್ದಾರೆಂದರೆ ಸರಿಯಲ್ಲ. ದಿಃ 10-08-1998 ರಂದು ಪುನಃ ತಾಲ್ಲೂಕು ಸರ್ವೆಯರ್ ರವರು ಸದರಿ ಜಮೀನನ್ನು ಅಳತೆ ಮಾಡಿ ನಕ್ಷೆಯನ್ನು ತಯಾರಿಸಿರುತ್ತಾರೆ., ಸದರಿ ನಕ್ಷೆಯಲ್ಲಿ ಸರ್ವೆ ನಂ.52 ರಲ್ಲಿ 1 ಎಕರೆ 20 ಗುಂಟೆ ಜಮೀನಲ್ಲಿ ಕೃಷ್ಣಪ್ಪನವರು ಸ್ವಾಧೀನಾನುಭವದಲ್ಲಿದ್ದಾರೆಂದು ನಮೂದು ಮಾಡಿದ್ದಾರೆಂದರೆ ಸರಿಯಲ್ಲ. ದಿಃ 09-09-2011 ರಂದು ತಾಲ್ಲೂಕು ಸರ್ವೆಯರ್ ರವರು ಸರ್ವೆ ನಂ.52 ರ ಜಮೀನಿಗೆ ಅಳತೆ ಮಾಡಿ ಸರ್ವೆ ನಕ್ಷೆ ಮತ್ತು ಅಳತೆಯನ್ನು ಮಾಡಿ 1 ಎಕರೆ 20 ಗುಂಟೆಯಲ್ಲಿ ಕೃಷ್ಣಪ್ಪನವರು ಸ್ವಾಧೀನದಲ್ಲಿದ್ದಾರೆಂದು ನಮೂದು ಮಾಡಿದ್ದಾರೆಂದರೆ ಸರಿಯಲ್ಲ.

ಕುಮಾರ ಎನ್ನುವವರು ನನ್ನ ಮಗ. ಸರ್ವೆಯರ್ ರವರು ದಿಃ 09-09-2011 ರಂದು ನಡೆಸಿದ ಸರ್ವೆ ಪ್ರಕಾರ ಸರ್ವೆ ನಂ.52 ರ ಉತ್ತರಕ್ಕೆ ನರಸಿಂಹಮೂರ್ತಿ ಮತ್ತು ಕುಮಾರ ಎಂಬುದಾಗಿ ನಮೂದಾಗಿದೆ ಎಂದರೆ ಸರಿಯಲ್ಲ. ತಾಲ್ಲೂಕು ಸರ್ವೆಯರ್ ರವರು ಮಾಡಿರುವ ಮೂರು ಸರ್ವೆಗಳ ವರದಿಗಳ ಪ್ರಕಾರ ಸರ್ವೆ ನಂ.52 ರ 1 ಎಕರೆ 20 ಗುಂಟೆ ಜಮೀನಿನಲ್ಲಿ ಪ್ರತಿವಾದಿಯ ತಂದೆ ಕೃಷ್ಣಪ್ಪನವರು ಸ್ವಾಧೀನಾನುಭವದಲ್ಲಿದ್ದಾರೆಂದು ನಮೂದು ಮಾಡಿದ್ದಾರೆಂದರೆ ಸರಿಯಲ್ಲ. ನಿಪಿ-4 ರಿಂದ ನಿಪಿ-8 ರ ಕಂದಾಯ ರಸೀದಿಗಳು ಪ್ರತಿವಾದಿಯ ತಂದೆ ಕೃಷ್ಣಪ್ಪನವರು ದಾವೆ ಸಲ್ಲಿಸಿದ ನಂತರ ದಾಖಲೆಗಳೆಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಈ ದಾವೆಗೋಸ್ಕರ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-9 ರ ದಾಖಲೆಯನ್ನು ದಿಃ 21-02-2015 ರಂದು ಪಡೆದಂತಹ ದಾಖಲೆ ಎಂದರೆ ಸರಿಯಲ್ಲ. ನಿಪಿ-10 ರಿಂದ ನಿಪಿ-13 ರ ದಾಖಲೆ ಗಳನ್ನು ಪ್ರತಿವಾದಿಯ ತಂದೆ ಸಲ್ಲಿಸಿರುವ ಅಸಲು ದಾವೆ ಸಂಖ್ಯೆ 394/2016 ರ ನಂತರ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-16 ರ ಸರ್ವೆ ನಕ್ಷೆ 2016 ನೇ ಸಾಲಿನಲ್ಲಿ ತಯಾರು ಮಾಡಿದ್ದು ಎಂದರೆ ಸರಿ. ನಿಪಿ-18 ಮತ್ತು 20 ರ ದಾಖಲೆಗಳು ಪ್ರತಿವಾದಿ ತಂದೆ ನಮ್ಮ ವಿರುದ್ದ ದಾವೆ ದಾಖಲಿಸಿದ ನಂತರ ಸೃಷ್ಠಿ ಮಾಡಿದ್ದು ಎಂದರೆ ಸರಿಯಲ್ಲ. ನಿಪಿ-21 ರಿಂದ ನಿಪಿ-24 ರ ದಾಖಲೆಗಳು ಪ್ರತಿವಾದಿಯ ತಂದೆ ಕೃಷ್ಣಪ್ಪನವರು ತಾವೆ ಸಲ್ಲಿಸಿದ ನಂತರ ಸೃಷ್ಠಿ ಮಾಡಿದ ದಾಖಲೆಗಳು

ಎಂದರೆ ಸರಿಯಲ್ಲ.

ನಾನು ದಾವ ಆಸ್ತಿಗೆ ಸಂಬಂಧಪಟ್ಟಂತೆ *2011* ಮತ್ತು *2012* ರ ಸಾಲಿನಲ್ಲಿ ಕಂದಾಯ ಕಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-*27* ರ ಕಂದಾಯ ರಸೀದಿಯಲ್ಲಿ ಅಸಸ್ ಮೆಂಟ್ ನಂ.*347* ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-*28* ರ ಪ್ರಕಾರ ಮಾದತ್ತಿಗೌಡರವರು ಪೊಲೀಸ್ ಸಬ್ ಇನ್ಸ್ ಪೆಕ್ಟರ್, ಲಕ್ಕವಳ್ಳಿಯವರಿಂದ ದೂರನ್ನು ಕೊಟ್ಟಿದ್ದಾರೆಂದರೆ ಸರಿ. ನಿಪಿ-*28* ರ ದಾಖಲೆಯಲ್ಲಿ ನಾವು ಮನೆ ಕಟ್ಟಿರುವ ಅಸಸ್‌ಮೆಂಟ್ ಸಂಖ್ಯೆ *347* ಎಂದು ಬರೆದಿದ್ದಾರೆಂದರೆ ಸರಿ. ನಿಪಿ-*30* ರ ದಿಃ *27-04-2016* ರಂದು ತರೀಕೆರೆಯಲ್ಲಿ ಪಡೆದುಕೊಂಡಿದ್ದೇವೆ ಎಂದರೆ ಸರಿ. ನಿಪಿ-*30* ರ ಪಡಿತರ ಚೀಟಿ ಪಡೆಯುವುದಕ್ಕಿಂತ ಮುಂಚೆ ನಾವು ಭದ್ರಾವತಿಯಲ್ಲಿ ಪಡಿತರ ಚೀಟಿಯನ್ನು ಹೊಂದಿದ್ದೆವು ಎಂದರೆ ಸರಿ. ನಿಪಿ-*31* ರ ಮತದಾರರ ಗುರುತಿನ ಚೀಟಿಯನ್ನು *2016* ನೇ ಸಾಲಿನಲ್ಲಿ ಪಡೆದುಕೊಂಡಿದ್ದೇನೆಂದರೆ ಸರಿ. ನಿಪಿ-*32* ಆಧಾರ್ ಕಾರ್ಡನ್ನು *2020* ನೇ ಸಾಲಿನಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಪಡೆದುಕೊಂಡಿದ್ದೇನೆಂದರೆ ಸರಿ. ನಾವು ನಿಪಿ-*30* ರಿಂದ *32* ರ ದಾಖಲೆಗಳನ್ನು ಈ ದಾವಗೋಸ್ಕರ ತಾವು ತರೀಕೆರೆ ತಾಲ್ಲೂಕಿನಲ್ಲಿ ವಾಸವಾಗಿದ್ದೇವೆ ಎಂದು ತೋರಿಸಲು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಈಗಲೂ ಸಹ ಭದ್ರಾವತಿಯಲ್ಲೇ ವಾಸವಾಗಿದ್ದು, ದಾವ ಆಸ್ತಿಯಲ್ಲಿ ಯಾವುದೇ ಮನೆ ಕಟ್ಟಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***